# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಆಳಂದ ತಾಲ್ಲೂಕಿನ ಆಳಂಗಾ ಗ್ರಾಮ ಪಂಚಾಯಿತಿಯ ಆರು ಜನ ಸದಸ್ಯರುಗಳಾದ ಶ್ರೀ ಜ್ಞಾನೇಶ್ವರ/ ಚಂದ್ರಕಾಂತ, ಶ್ರೀ ಬಂಡುರಾವ್ ಸಿಂಧೆ, ಶ್ರೀಮತಿ ಸುರೇಖಾ ವಿಲಾಸ, ಶ್ರೀಮತಿ ಹಸೀನಾ ಖಾಸಂ, ಶ್ರೀ ಸಂಜಯ್ ಶಿವಾಜಿ, ಶ್ರೀ ಶಿವಲಿಂಗ ಗುಂಡಪ್ಪ, ರವರುಗಳು ಸತತ ನಾಲ್ಕು ಸಾಮಾನ್ಯ ಸಭೆಗೆ ಗೈರು ಹಾಜರಾಗಿರುವ ಕುರಿತು: ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ ಜಿಪಕ/ಪಶಾ:ಗ್ರಾಪಂ/64/2016-17/982 ದಿನಾಂಕ:04.01.2017
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:71:ಗ್ರಾಪಂಅ:2017, ದಿನಾಂಕ:02.02.2017 ರ ಕಾರಣ ಕೇಳುವ ನೋಟಿಸ್ಸು.
3. ಆಳಂಧ ತಾಲ್ಲೂಕಿನ ಆಳಂಗಾ ಗ್ರಾಮ ಪಂಚಾಯಿತಿಯ ಆರು ಜನ ಸದಸ್ಯರು, ಸಾಮಾನ್ಯ ಸಭೆಗೆ ಗೈರು ಹಾಜರಾಗಿರುವ ಕುರಿತು ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 08.03.2017.
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ದಿನಾಂಕ:09.03.2017.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ ಜಿಪಕ/ಡಿ.ಆರ್.ಡಿ.ಎ:ಪಕಾ:ಸಿಬ್ಬಂದಿ/64/2017-18/72 ದಿನಾಂಕ:11.05.2017

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ತಮ್ಮ ಪ್ರಸ್ತಾವನೆಯಲ್ಲಿ, ಆಳಂದ ತಾಲ್ಲೂಕಿನ ಆಳಂಗಾ ಗ್ರಾಮ ಪಂಚಾಯಿತಿ ಸದಸ್ಯರು, ಸಾಮಾನ್ಯ ಸಭೆಗೆ ಗೈರು ಹಾಜರಾಗಿರುವ ಕುರಿತು. ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಆಳಂದ, ಇವರು ಆಳಂದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಆಳಂಗ ಗ್ರಾಮ ಪಂಚಾಯಿತಿ, ಈ ಕೆಳಗೆ ತೋರಿಸಿರುವಂತೆ 6 ಜನ ಗ್ರಾಮ ಪಂಚಾಯಿತಿ ಸದಸ್ಯರುಗಳು 4 ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗೆ ಗೈರು ಹಾಜರಾಗಿರುತ್ತಾರೆಂದು ಈ ಕೆಳಕಂಡಂತೆ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಾಮಾನ್ಯ ಸಭೆ ದಿ:24.07.15 | ಸಾಮಾನ್ಯ ಸಭೆ ದಿ:18.05.16 | ಸಾಮಾನ್ಯ ಸಭೆ ದಿ:05.08.16 | ಸಾಮಾನ್ಯ ಸಭೆ ದಿ:16.08.16 |
|---|---|---|---|---|---|
| 1. | ಜ್ಞಾನೇಶ್ವರ/ ಚಂದ್ರಕಾಂತ | ಗೈರು | ಗೈರು | ಗೈರು | ಗೈರು |
| 2. | ಬಂಡುರಾವ್ ಸಿಂಧೆ | ಗೈರು | ಗೈರು | ಗೈರು | ಗೈರು |
| 3. | ಸುರೇಖಾ ವಿಲಾಸ | ಗೈರು | ಗೈರು | ಗೈರು | ಗೈರು |
| 4. | ಹಸೀನಾ ಖಾಸಂ | ಗೈರು | ಗೈರು | ಗೈರು | ಗೈರು |
| 5. | ಸಂಜಯ ಶಿವಾಜಿ | ಗೈರು | ಗೈರು | ಗೈರು | ಗೈರು |
| 6. | ಶಿವಲಿಂಗ ಗುಂಡಪ್ಪ | ಗೈರು | ಗೈರು | ಗೈರು | ಗೈರು |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿ ರವರ ವರದಿಯನ್ನು ಪರಿಶೀಲಿಸಲಾಗಿ ಆಳಂಗಾ ಗ್ರಾಮ ಪಂಚಾಯಿತಿಯ 6 ಜನ ಸದಸ್ಯರು, ಸತತವಾಗಿ ಸಾಮಾನ್ಯ ಸಭೆಗೆ ಗೈರು ಹಾಜರಾಗಿರುವುದು ವರದಿಯಿಂದ ಸಾಬೀತಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದುದರಿಂದ ಸದಸ್ಯರು ಸತತವಾಗಿ 4 ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗೆ ಗೈರು ಹಾಜರಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ (i) (iii) ಉಲ್ಲಂಘಿಸಿರುವುದರಿಂದ ಸದರಿ ಅಧಿನಿಯಮದಡಿಯಲ್ಲಿ ಸದಸ್ಯರುಗಳ ವಿರುದ್ಧ ಮುಂದಿನ ಸೂಕ್ತ ಕ್ರಮಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ರ ಅಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಕಾರಣ ಕೇಳುವ ನೋಟಿಸ್ಸಿಗೆ ಆಳಂಗಾ ಗ್ರಾಮ ಪಂಚಾಯಿತಿಯ ಆರೋಪಿತ ಆರು ಜನ ಸದಸ್ಯರುಗಳಾದ ಶ್ರೀ ಜ್ಞಾನೇಶ್ವರ/ ಚಂದ್ರಕಾಂತ, ಶ್ರೀ ಬಂಡುರಾವ್ ಸಿಂಧೆ, ಶ್ರೀಮತಿ ಸುರೇಖಾ ವಿಲಾಸ, ಶ್ರೀಮತಿ ಹಸೀನಾ ಖಾಸಂ, ಶ್ರೀ ಸಂಜಯ್ ಶಿವಾಜಿ, ಶ್ರೀ ಶಿವಲಿಂಗ ಗುಂಡಪ್ಪ ರವರುಗಳು ಈ ಕೆಳಕಂಡಂತೆ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಸದರಿ ಆರೋಪಿತ ಸದಸ್ಯರುಗಳು ತಮ್ಮ ಲಿಖಿತ ಹೇಳಿಕೆಯಲ್ಲಿ, ಇವರುಗಳು ದಿನಾಂಕ:24.07.2015, 18.05.2015, 05.08.2016 ಮತ್ತು 16.08.2016 ರಂದು ನಡೆದ ಸಾಮಾನ್ಯ ಸಭೆಗೆ ಗೈರು ಹಾಜರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲಿನ ಸಭೆಗಳಿಗೆ ಇವರೆಲ್ಲರೂ ಹಾಜರಿದ್ದು, ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇವರುಗಳ ಸಹಿ ತೆಗೆದುಕೊಂಡಿರುವುದಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮತ್ತು ಅಧ್ಯಕ್ಷರು ನಿಮ್ಮ ಸಹಿ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರನ್ನು ಹೊರತುಪಡಿಸಿ ಉಳಿದ ಸದಸ್ಯರ ಸಹಿಯನ್ನು ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡಿರುತ್ತಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಆರೋಪಿತ ಸದಸ್ಯರುಗಳಿಗೆ ಸಾಮಾನ್ಯ ಸಭೆಯಲ್ಲಿ ಯಾವುದೇ ರೀತಿಯ ಬೆಲೆ ಕೊಡದೆ ಇವರುಗಳನ್ನು ಕಡೆಗಣಿಸಿ, ಮಾತನಾಡಲು ಕೂಡ ಅವಕಾಶ ಕೊಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಚಾರವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ:23.12.2016 ರಂದು ದೂರು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ಆರೋಪಿತರು 2015-16 ನೇ ಸಾಲಿನ ವಿವಿಧ ಖಾತೆಗಳ ಮಾಹಿತಿಯನ್ನು ಮಾಹಿತಿ ಹಕ್ಕಿನಡಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮತ್ತು ಅಧ್ಯಕ್ಷರ ವಿರುದ್ಧ ಕೋರಿದ್ದರಿಂದ ನಮ್ಮ ಸದಸ್ಯತ್ವವನ್ನು ರದ್ದುಗೊಳಿಸಿರುವುದಾಗಿ ಬೆದರಿಕೆ ಹಾಕಿದ್ದಾರೆಂದು ತಿಳಿಸಿರುತ್ತಾರೆ. ಸದರಿಯವರುಗಳು ಅವರ ಮೇಲಿನ ಆರೋಪಗಳು ಸುಳ್ಳಾಗಿರುತ್ತವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರ ವಿರುದ್ಧ ಸೂಕ್ತ ತನಿಖೆ ನಡೆಸಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಗೆ ಆಳಂಗಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರು ಹಾಜರಿದ್ದು, ತಮ್ಮ ಹೇಳಿಕೆಯನ್ನು ಲಿಖಿತವಾಗಿ ಸಲ್ಲಿಸಿದ್ದು, ಸದರಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಮಾರುತಿ ಟಿ ಪ್ರಸಾದ್ ರವರು ತಮ್ಮ ಹೇಳಿಕೆಯಲ್ಲಿ ಸದರಿ ಆರೋಪಿತ ಸದಸ್ಯರುಗಳು ನಾಲ್ಕು ಸಾಮಾನ್ಯ ಸಭೆಗಳಿಗೆ ಪೂರ್ಣವಾಗಿ ಗೈರು ಹಾಜರಾಗಿರುತ್ತಾರೆ ಮತ್ತು ಸಭೆಯಲ್ಲಿ ಅಸಭ್ಯ ರೀತಿಯಿಂದ ವರ್ತಿಸಿರುತ್ತಾರೆ ಹಾಗೂ ತನಗೆ ಜೀವ ಬೆದರಿಕೆ ಹಾಕಿರುತ್ತಾರೆಂದು ತಿಳಿಸಿರುತ್ತಾರೆ. ಅಧ್ಯಕ್ಷರಾದ ಶ್ರೀ ಪ್ರತಾಪ್ ಜಿ. ಕುಲಕರ್ಣಿ ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಸದರಿ ಸದಸ್ಯರುಗಳು ಸಭೆಗೆ ಬಂದರೂ ಹಾಜರಿ ಪುಸ್ತಕದಲ್ಲಿ ಸಹಿ ಮಾಡುವುದಿಲ್ಲವೆಂದು ತಿಳಿಸಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:22.03.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಲಬುರಗಿ ಯವರ ವರದಿ, ಸದರಿ ಸದಸ್ಯರುಗಳು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ಆಳಂಗಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಸದರಿ ಸದಸ್ಯರುಗಳು ನಿಯಮಾನುಸಾರ ಸಾಮಾನ್ಯ ಸಭೆಗೆ ಹಾಜರಾಗದೆ, ಸಹಿ ಮಾಡಲು ಅವಕಾಶ ಮಾಡಿ ಕೊಡುತ್ತಿಲ್ಲವೆಂದು ಈಗ ಹೇಳುತ್ತಿರುವುದು ಹಾಗೂ ಈ ಬಗ್ಗೆ ಸಭೆಯ ಸಮಯ ಅಥವಾ ನಂತರ, ಕಾರ್ಯನಿರ್ವಾಹಕ ಅಧಿಕಾರಿಗಳಿಗಾಗಲಿ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗಾಗಲಿ ದೂರು ಕೊಟ್ಟಿರದ ಹಿನ್ನೆಲೆಯಲ್ಲಿ ಸದರಿ ಸದಸ್ಯರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯಿತಿ ಸದಸ್ಯತ್ವದಿಂದ ತೆಗೆದು ಹಾಕಲು ನಿರ್ಣಯಿಸಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಕೆಲವು ಗೊಂದಲಗಳು ಕಂಡು ಬಂದಿದ್ದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರಿಗೆ ಸದರಿ ಪ್ರಕರಣವನ್ನು ಪುನರ್ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. ಜಿಲ್ಲಾ ಪಂಚಾಯಿತಿ. ಕಲಬುರಗಿ ಜಿಲ್ಲೆ ರವರು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಳಂದ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸದರಿ ಪ್ರಕರಣವನ್ನು ಪುನರ್ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ತಾಲ್ಲೂಕು

ಕಾರ್ಯನಿರ್ವಾಹಕ ಅಧಿಕಾರಿಗಳು ಸದರಿ ಪ್ರಕರಣವನ್ನು ಪುನರ್ ಪರಿಶೀಲಿಸಿ ನೀಡಿರುವ ವರದಿಯಂತೆ ಆಳಂಗಾ ಗ್ರಾಮ ಪಂಚಾಯಿತಿಯ ಆರು ಜನ ಸದಸ್ಯರುಗಳು ಈ ಕೆಳಕಂಡಂತೆ ಸಾಮಾನ್ಯ ಸಭೆಗಳಿಗೆ ಹಾಜರಿರುತ್ತಾರೆ.

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಾಮಾನ್ಯ ಸಭೆ ದಿ:24.07.15 | ಸಾಮಾನ್ಯ ಸಭೆ ದಿ:09.09.16 | ಸಾಮಾನ್ಯ ಸಭೆ ದಿ:18.05.16 | ಸಾಮಾನ್ಯ ಸಭೆ ದಿ:05.08.16 | ಸಾಮಾನ್ಯ ಸಭೆ ದಿ:16.08.16 |
|---|---|---|---|---|---|---|
| 1. | ಜ್ಞಾನೇಶ್ವರ/ ಚಂದ್ರಕಾಂತ | ಗೈರು | ಹಾಜರಿ | ಗೈರು | ಗೈರು | ಗೈರು |
| 2 | ಬಂಡುರಾವ್ ಸಿಂಧೆ | ಗೈರು | ಹಾಜರಿ | ಗೈರು | ಗೈರು | ಗೈರು |
| 3 | ಸುರೇಖಾ ವಿಲಾಸ | ಗೈರು | ಹಾಜರಿ | ಗೈರು | ಗೈರು | ಗೈರು |
| 4 | ಹಸೀನಾ ಖಾಸಂ | ಗೈರು | ಹಾಜರಿ | ಗೈರು | ಗೈರು | ಗೈರು |
| 5 | ಸಂಜಯ ಶಿವಾಜಿ | ಗೈರು | ಹಾಜರಿ | ಗೈರು | ಗೈರು | ಗೈರು |
| 6 | ಶಿವಲಿಂಗ ಗುಂಡಪ್ಪ | ಗೈರು | ಹಾಜರಿ | ಗೈರು | ಗೈರು | ಗೈರು |

ಆದ್ದರಿಂದ ಸದರಿ ಆರೋಪಿತ ಸದಸ್ಯರುಗಳು ಆಳಂಗಾ ಗ್ರಾಮ ಪಂಚಾಯಿತಿಯ ಸತತ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದಂತೆ ಕಂಡು ಬರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:19.08.2017 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಲಬುರಗಿ ಯವರ ವರದಿ, ಸದರಿ ಸದಸ್ಯರುಗಳು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ಆಳಂಗಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು, ಆಳಂಗಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಮಾರುತಿ ಟಿ. ಪ್ರಸಾದ್, ರವರು ಆರೋಪಿತ ಸದಸ್ಯರುಗಳ ಗೈರು ಹಾಜರಿ ಬಗ್ಗೆ ತಪ್ಪು ಮಾಹಿತಿ ನೀಡಿರುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯಿಂದ ಸಾಬೀತಾಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಆರೋಪಿತ ಸದಸ್ಯರುಗಳು ಆಳಂಗಾ ಗ್ರಾಮ ಪಂಚಾಯಿತಿಯ ಸತತ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗದ ಹಿನ್ನೆಲೆಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/71/ಗ್ರಾಪಂಅ/2017**
**ಬೆಂಗಳೂರು, ದಿನಾಂಕ:-19-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯ, ಆಳಂದ ತಾಲ್ಲೂಕಿನ ಆಳಂಗಾ ಗ್ರಾಮ ಪಂಚಾಯಿತಿಯ ಆರು ಜನ ಸದಸ್ಯರುಗಳಾದ ಶ್ರೀ ಜ್ಞಾನೇಶ್ವರ/ ಚಂದ್ರಕಾಂತ, ಶ್ರೀ ಬಂಡುರಾವ್ ಸಿಂಧೆ, ಶ್ರೀಮತಿ ಸುರೇಖಾ ವಿಲಾಸ, ಶ್ರೀಮತಿ ಹಸೀನಾ ಖಾಸಂ, ಶ್ರೀ ಸಂಜಯ್ ಶಿವಾಜಿ, ಶ್ರೀ ಶಿವಲಿಂಗ ಗುಂಡಪ್ಪ ರವರುಗಳು ಸತತ ನಾಲ್ಕು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾಗಿರದ ಹಿನ್ನೆಲೆಯಲ್ಲಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.

3. ಶ್ರೀ ಜ್ಞಾನೇಶ್ವರ/ಚಂದ್ರಕಾಂತ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
4. ಶ್ರೀ ಬಂಡುರಾವ್ ಸಿಂಧೆ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
5. ಶ್ರೀಮತಿ ಸುರೇಖಾ ವಿಲಾಸ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಶ್ರೀಮತಿ ಹಸೀನಾ ಖಾಸಂ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
7. ಶ್ರೀ ಸಂಜಯ ಶಿವಾಜಿ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
8. ಶ್ರೀ ಶಿವಲಿಂಗ ಗುಂಡಪ್ಪ, ಸದಸ್ಯರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
9. ಅಧ್ಯಕ್ಷರು, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
10. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆಳಂಗಾ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
12. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

…………